ಶ್ರೀ ಆರ್. ಎಂ. ಪಾಟೀಲ್.—ಒಂದು ಹಳ್ಳಿ ಈಗ ಕೇಂದ್ರಕ್ಕೆ ಕಳುಹಿಸಿದ ಯಾದಿಯಲ್ಲ ನಮೂದಿಸಿ ಕಳಿಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆಂದು ಹೇಳಿದ್ದು 3 ಹಳ್ಳಿಯೆಂದು ಅಲ್ಲ. 2 ಹಳ್ಳಿ ಬಗ್ಗೆ ಪ್ಲಾನ್ಸ್ ಮತ್ತು ಎಸ್ಟಿಮೇಟ್ ಬಂದಿಲ್ಲ, ಬಂದನಂತರ ಕಳಿಸಿಕೊಡಲಾಗುವುದೆಂದು ಹೇಳಿದೆ. ನೂಪರಿಂಟೆಂಡಿಂಗ್ ಇಂಜನೀಯರ್ ಕಡೆಯಿಂದ ಇನ್ನೂ ಬಂದಿಲ್ಲ. ಪಂಚಾಯತಿಯವರು ತಮ್ಮವತಿಗೆ ಯಾವಾಗ ಕೊಟ್ಟಿದ್ದಾರೆ ಎನ್ನುವುದು ರೆಕಾರ್ಡಿನಲ್ಲಿ ಇಲ್ಲ. ತಿಳಿದುಕೊಂಡು ಅವಶ್ಯ ಏದ್ದರೆ ಹೇಳುತ್ತೇನೆ.

Construction of New Primary School Buildings.

*Q.—54. Sri SIDDAIAH KASHIMATH (Shirahatti).—

Will the Government be pleased to state :—

(*a*) the amount of grant allotted to the District School Board, Dharwar, to construct New Primary School Buildings during 1964–65 ;

(*b*) the total number of Primary School Buildings constructed during the last three years in the above District ?

A.—Sri S. R. KANTHI (Minister for Education).—

(*a*) Nil.

(*b*) (i) By District School Board	...	Nil.
(ii) By Taluk Development Boards	...	87.

ಶ್ರೀ ಸಿದ್ದಯ್ಯ ಕಾಶೀಮಠ.—ಹೊಸ ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ಬಿಜಾಪುರ, ಬೆಳಗಾಂ ಮತ್ತು ಕಾರವಾರ ಜಿಲ್ಲಾ ಶಾಲಾ ಮಂಡಳಿಗಳಿಗೆ ಗ್ರಾಂಟ್ ಕೊಟ್ಟು ಧಾರವಾಡ ಜಿಲ್ಲಾ ಶಾಲಾ ಮಂಡಲಿಗೆ ಗ್ರಾಂಟ್ ಕೊಡದಿರಲು ಕಾರಣವೇನು ?

†ಶ್ರೀ ಎಸ್. ಆರ್. ಕಂಠಿ.—ಯಾವ ಸ್ಕೂಲು ಬೋರ್ಡಿಗೂ ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಗೆ ಜಿಲ್ಲಾಧಿಕಾರಿಗಳ ಮೂಲಕ ದುಡ್ಡು ಹೋಗುತ್ತಿದೆ. ಈ ಪ್ರಕಾರ ಧಾರವಾಡ ಜಿಲ್ಲೆಗೆ ಕೂಡ ಕೊಟ್ಟಿದ್ದೇವೆ. ಹೇಗೆ ಕೊಟ್ಟಿದ್ದೇವೆಂದರೆ: 1962–63ರಲ್ಲಿ—ಜೂನಿಯರ್ ಪ್ರೈಮರಿ ಶಾಲೆಗಳಿಗೆ 13 ಸಾವಿರ ರೂಪಾಯಿಗಳು, ಸೀನಿಯರ್ ಪ್ರೈಮರಿ ಶಾಲೆಗಳಿಗೆ 6 ಸಾವಿರ ರೂಪಾಯಿಗಳು, 1963–64ರಲ್ಲಿ—ಜೂನಿಯರ್ ಪ್ರೈಮರಿ ಶಾಲೆಗಳಿಗೆ 5 ಸಾವಿರ ರೂಪಾಯಿಗಳು, ಸೀನಿಯರ್ ಪ್ರೈಮರಿ ಶಾಲೆಗಳಿಗೆ ಏನೂ ಇಲ್ಲ, 1964–65ರಲ್ಲಿ ಜೂನಿಯರ್ ಪ್ರೈಮರಿ ಶಾಲೆಗಳಿಗೆ 2,500 ರೂಪಾಯಿಗಳು, ಸೀನಿಯರ್ ಪ್ರೈಮರಿ ಶಾಲೆಗಳಿಗೆ 2,400 ರೂಪಾಯಿಗಳು.

ಶ್ರೀ ಸಿದ್ದಯ್ಯ ಕಾಶೀಮಠ.—ಮಕ್ಕಳ ಸಂಖ್ಯೆ ಮಿತಿಮೀರಿ ಹೋಗುತ್ತಿರುವುದರಿಂದ, ಸರ್ಕಾರದವರು ಸ್ಥಳಾವಕಾಶಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರೆಂದು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆಯನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ ತೆಗೆದು ಕೊಂಡು ಮಾಡುತ್ತಿದ್ದಾರೆ. ಈ ಪ್ರಶ್ನೆಯ ಉತ್ತರದಲ್ಲಿ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ 87 ಶಾಲೆಗಳನ್ನು 3 ವರ್ಷಗಳಲ್ಲಿ ಕಟ್ಟಿದ್ದಾರೆ.

ಶ್ರೀ ಟಿ. ಕೆ. ಕಂಬಳಿ.—ಧಾರವಾಡ ಜಿಲ್ಲಾ ಮಂಡಲಯವರು ಶಾಲಾ ಕಟ್ಟಡದ ದೆಶೆಯಿಂದ ದುಡ್ಡು ತುಂಬಿಸಿಕೊಟ್ಟಿದ್ದಾರೆ, ಹಾಗೆ ದುಡ್ಡು ಕೊಟ್ಟಿದ್ದರೂ ನಹ ಶಾಲಾ ಕಟ್ಟಡ ಏತಕ್ಕೆ ಕಟ್ಟಿಸಿ ಕೊಟ್ಟಿಲ್ಲ ?

ಶ್ರೀ ಎಸ್. ಆರ್. ಕಂಠಿ—ದುಡ್ಡು ಯಾವುದಾದರೂ ಇದ್ದರೆ ಅದನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಟ್ರಾನ್ಸ್‌ಫರ್ ಮಾಡಿದ್ದೇವೆ.

---

†Indicates that the remarks or speeches have not been revised by the member concerned

ಶ್ರೀ ಎಸ್. ಎಂ. ಗುರೆಡ್ಡಿ.—ದೇಶದಲ್ಲಿ ತುರ್ತುಪರಿಸ್ಥಿತಿ ಒದಗಿದಾಗ ಕಟ್ಟಡಗಳನ್ನು ಕಟ್ಟಲು ತಾವು ಆಜ್ಞೆ ಕೊಟ್ಟಿಲ್ಲ. ಇದರಿಂದ ತಾಲ್ಲೂಕ್ ಬೋರ್ಡ್‌ಗಳು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನಾದರೂ ಆಜ್ಞೆ ಕೊಟ್ಟು ಶಾಲಾಕಟ್ಟಡಗಳನ್ನು ಮತ್ತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ದುಡ್ಡು ಕೊಡುವುದಿಲ್ಲವೆಂದು ಹೇಳಿದ್ದು ತುರ್ತು ಪರಿಸ್ಥಿತಿಯು ಕಾರಣ. ಆದರೆ ತಾಲ್ಲೂಕ್ ಬೋರ್ಡ್‌ಗಳು ಹಾಗೂ ತಾಲ್ಲೂಕ್ ಪಂಚಾಯತಿ ಕಮಿಟಿಯವರು ಮತ್ತು ಊರಿನವರು ಸೇರಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸಿಕೊಳ್ಳಬಾರದೆಂದು ಹೇಳಿಲ್ಲ.

ಶ್ರೀ ಟಿ. ಕೆ. ಕಂಬಳಿ.—ತಾಲ್ಲೂಕ್ ಬೋರ್ಡ್‌ನವರು ಶಾಲಾಕಟ್ಟಡಗಳನ್ನು ಬೇಗನೆ ತೆಗೆದು ಕೊಳ್ಳುವುದಕ್ಕಾಗುತ್ತದೆಯೆ ?

ಶ್ರೀ ಎಸ್. ಆರ್. ಕಂಠಿ.—ಜಿಲ್ಲಾಧಿಕಾರಿಗಳ ಹೆಸರಿನಲ್ಲಿರುವ ದುಡ್ಡನ್ನು, ಜನರು ಕೊಟ್ಟಿರುವ ದುಡ್ಡನ್ನು ಡಿಸ್ಟ್ರಿಕ್ಟ್ ಬಿಲ್ಡಿಂಗ್ ಕಮಿಟಿಯ ಹೆಸರಿನಲ್ಲಿ ಇಟ್ಟಿದೆ. ಬಿಲ್ಡಿಂಗ್ ಕಮಿಟಿಯಿಂದ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಂಗ್ ಟ್ರಾನ್ಸ್‌ಫರ್ ಮಾಡುತ್ತಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಧಾರವಾಡ ಜಿಲ್ಲೆಯಲ್ಲ ಕಟ್ಟಡಗಳಿಲ್ಲದೆ ಇರತಕ್ಕ ಸ್ಕೂಲುಗಳ ಸಂಖ್ಯೆಯೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಬೇರೆ ಒಂದು ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಹಾರ ಪರಿಸ್ಥಿತಿ ಕಠಿಣವಾಗಿರುವ ಈ ಸಮಯದಲ್ಲಿ ಸರ್ಕಾರ ಈ ಶಾಲಾ ಕಟ್ಟಡಗಳಿಗೆ ಖರ್ಚುಮಾಡುವ ಹಣವನ್ನು ನಣ್ಣನೀರಾವರಿ ಮತ್ತು ಆಹಾರ ಬೆಳೆಯುವುದ ಕ್ಕೋಸ್ಕರ ವ್ಯವಸಾಯ ಖಾತೆಗೆ ಡೈವರ್ಟ್ ಮಾಡುವುದಕ್ಕೆ ಏನಾದರು ಯೋಚನೆ ಮಾಡಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ನಾವು ಬಹಳ ಖರ್ಚು ಮಾಡುತ್ತಿದ್ದೇವೆಂದು, ಇದಕ್ಕೆ ಸಧ್ಯದಲ್ಲಿ 7 ಲಕ್ಷ ರೂಪಾಯಿಗಳು ಇದೆ. ಈ 7 ಲಕ್ಷವನ್ನು 20 ಜಿಲ್ಲೆಗಳಿಗೆ ಹಂಚಬೇಕು. ಆದ್ದರಿಂದ ಬಹಳ ಕಡಮೆ ಈ ಬಾಬಿಗೆ ಇದೆ. ಮತ್ತು ಈ ಹಣವನ್ನು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳವರೇ ಕೊಡುತ್ತಿದ್ದಾರೆ.

ಶ್ರೀ ಬಿ. ಎರ್. ಗೌಡ.—ಪ್ರಾಥಮಿಕ ಶಾಲಾ ಕಟ್ಟಡಗಳಗೋಸ್ಕರ ಹೊಸ ಯೋಜನೆ ಪ್ರಕಾರ ಒಂದು ಸಾವಿರದಷ್ಟು ಬೆಳೆಬಾಳುವ ಮರ ಕೊಡಬೇಕೆಂದು ಅಪ್ಪಣೆ ಕೊಡಿಸಿದ್ದೀರಿ ? ಈ ವರ್ಷ ಕಟ್ಟುವುದಕ್ಕೆ ಅದನ್ನು ಯಾರ ಮುಖಾಂತರ ತೆಗೆದುಕೊಳ್ಳುವುದು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಒಂದು ಗೌರ್ನಮೆಂಟ್ ಆರ್ಡರ್ ಇದೆ. ಆ ಆರ್ಡರಿನಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ನಾವು ದುಡ್ಡಿನ ಬದಲು ಒಂದು ಸಾವಿರ ರೂಪಾಯಿ ಮರ ಕೊಡುತ್ತೇವೆಂದು. ಅದನ್ನು ಪ್ರತ್ಯೇಕವಾಗಿ ಪ್ರತಿಯೊಂದಕ್ಕೂ ಕೊಡುವುದಿಲ್ಲ. ಆಯಾಯಾ ತಾಲ್ಲೂಕ್ ಬೋರ್ಡ್ ಇಂಡೆಂಟ್ ಮಾಡಬೇಕು, ಮತ್ತು ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮಕ್ಕಳಿಗೆ ಸ್ಥಳಾವಕಾಶವಿಲ್ಲದಿರುವುದರಿಂದ ಹಳ್ಳಿಗಳಲ್ಲಿರುವ ಚಾವಡಿಗಳನ್ನು, ದೇವಸ್ಥಾನಗಳನ್ನು, ಮಸೀದಿಗಳನ್ನು ಶಾಲೆಗಾಗಿ ಉಪಯೋಗಿಸುವುದಕ್ಕೆ ಸರ್ಕಾರದವರು ಅನುಮತಿ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಅನುಮತಿ ಬೇಕಿಲ್ಲ. ಆಗಲೇ ನಡೆದಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಶಾಲಾ ಕಟ್ಟಡಗಳಿಗೆ ಹಣ ಕೊಡುವುದಕ್ಕೆ ಸರ್ಕಾರ ತುರ್ತುಪರಿಸ್ಥಿತಿಯೆಂದು ಹೇಳಿರುವಾಗ, ಪಂಚಾಯತಿಗಳಿಗೆ ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ ತುರ್ತುಪರಿಸ್ಥಿತಿ ಇಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇವರು ಕೊಟ್ಟರೆ ಕೊಡಬಹುದೆಂದು ಹೇಳಿದ್ದೇವೆ. ಪಂಚಾಯತಿ ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ ತುರ್ತುಪರಿಸ್ಥಿತಿಯಿಲ್ಲವೆಂದು ಹೇಳಲಿಲ್ಲ. ಆದರೆ ಅವರು ಪ್ರತಿಯೊಂದು ಕಡೆಯೂ ಬೇಕಾದಷ್ಟು ಕೆಲಸ ಮಾಡಿದ್ದಾರೆ. ಇಲ್ಲೇ 87 ಶಾಲಾ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆಂದು ಹೇಳಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿ ಬೇಕಾದಷ್ಟು ಸ್ಕೂಲು ಕಟ್ಟಡ ಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ.—ಈ ಫಾರೆಸ್ಟ್ ಡಿಪೋ ಬಹಳ ದೂರವಿರುವ ಕಡೆ ಹಣವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹಣ ಕೊಡುವುದಕ್ಕಾಗುವುದಿಲ್ಲ. ಅವರು ಮುರವನ್ನೇ ತೆಗೆದು ಕೊಳ್ಳಬೇಕು. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳವರು ಎಂಟು-ಹತ್ತು-ಹ್ಯದಿನ್ಯೆದು ಶಾಲೆಗಳನ್ನು ಒಂದೊಂದು ವರ್ಷ ತೆಗೆದುಕೊಳ್ಳುತ್ತಾರೆ. ಎರ್ಲಾ ಶಾಲೆಗಳಿಗೆ ಎಷ್ಟು ದುಡ್ಡು ಬೇಕು, ಎಷ್ಟು ಮರಬೇಕು, ಎಂಬುದನ್ನು ಲೆಕ್ಕಹಾಕಿ ಇಂಡೆಂಟ್ ಮಾಡಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾಲ್ಲೂಕ್ ಬೋರ್ಡ್‌ಗಳಿಗೆ ಮತ್ತು ಪಂಚಾಯತಿಗಳಿಗೆ ತುರ್ತುಪರಿಸ್ಥಿತಿಯಿಲ್ಲವೆಂದು ಹೇಳಿದ ಮೇಲೆ ಅಲ್ಲಿ ಎಲಕ್ಷನ್ ಏತಕ್ಕೆ ನಡೆಸಲಿಲ್ಲ ?

Mr. SPEAKER.—It is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾಲ್ಲೂಕ್ ಬೊರ್ಡ್‌ಗಳಿಗೆ ಕೊಡತಕ್ಕ ಹಣವನ್ನು ವ್ಯವಸಾಯಕ್ಕೆ ಮತ್ತು ಸಣ್ಣ ನೀರಾವರೀ ಕಾಮಗಾರಿಗಳಿಗೆ ಒದಗಿಸುವುದಕ್ಕೆ ಸರ್ಕಾರ ದವರೇನಾದರು ತೀರ್ಮಾನ ಮಾಡಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಒಂದು ಸೂಚನೆಯಾಗಿದೆ. ಆ ಅಭಿಪ್ರಾಯ ನದಸ್ಯರದು ಅಲ್ಲವೆಂದು ಕಾಣುತ್ತದೆ.

Mr. SPEAKER.—Question is over.

QUESTIONS FOR ANSWERS ON THE DAY

(but not taken up)

Collection of Sports and Reading Room Fees.

Q.—173. Sri B. P. KADAM (Karwar).—

Will the Government be pleased to state :—

(*a*) whether it is a fact that a sum of Rs. 3 per annum is compulsorily collected in the Bombay Karnatak area from the pupils of the primary schools studying in standards V, VI and VII for the purpose of sports and reading room and the amount is credited for the Primary Education Fund ;

(*b*) whether it is a fact that the fee is compulsory for all poor as well as Scheduled Caste pupils :

(*c*) the total amount collected under this item in the Bombay-Karnatak area Since 1961-62 ;

(*d*) out of which the amount that has been spent for sports and reading room purpose since 1961-62 ?

A.—Sri S. R. KANTHI (Minister for Education).—

(*a*) Yes ; the amount was being credited to the Primary Education Fund under deposit head, pending instructions from the Director of Public Instruction. It is now withdrawn and credited to the Miscellaneous Fees Fund in accordance with the instructions of the Director of Public Instruction.

(*b*) Yes, unless exempted from payment of the fees in any case of special hardship.

(*c*) Rs. 13,03,272.

(*d*) Rs. 11, 461.